

ಎಂದು ದೊಡ್ಡವರು ಆಡುವುದನ್ನ ಕೇಳಿಸಿಕೊಂಡಿದ್ದ ಮಕ್ಕಳು ಅದನ್ನೆ ಒಕ್ಕೊರಲಿನಿಂದ ಹೇಳಿದ್ದರು.

ಹೀಗೆ ಇತಿಹಾಸದಲ್ಲಿ ಎಂದೂ ನಡೆಯದ ಸ್ಕೂಲ್ ಡೇ ಫಂಕ್ಷನ್ ಅನ್ನು ಮಾದಿರ್ ಶಾಲೆಯಲ್ಲಿ ಮಾಡ್ತಾರಂತೆ ಎಂಬ ಸುದ್ದಿ ಹಲವರು ಹುಬ್ಬೇರಿಸುವಂತೆ ಮಾಡಿತು. ಕೆಲವರು, 'ಈ ನನ್ಮಕ್ಕಿಗೆ ಎಲ್ಲಿ ಬರ್ಬೇಕು ಅದರ ಗಂಧ ಗಾಳೆ' ಎಂದು ಮಾತಾಡಿಕೊಂಡರು. ಇವರೇನಿದ್ದರೂ ಸತ್ತವರ ಮುಂದೆ ತಮಟೆ ಬಡಿಬೇಕಷ್ಟೆ ಎಂದರು. ಇನ್ನೂ ಕೆಲವರು 'ಸ್ಕೂಲ್ ಡೇ, ಡ್ಯಾನ್ಸು ಅಂದ್ರೆ ಆ ಹಾಡಿಗೆ ತಕ್ಕನಾದ ಡ್ರೆಸ್ಸು ಎಲ್ಲ ಬೇಕಾಗುತ್ತೆ, ಈ ಮೇಡಮ್ಮು ಎಷ್ಟೇ ಹರಿಚ್ಕೆಂಡ್ರು ಅಲ್ಲೆ ಹುಡುಗ್ರು ಅವ್ರಪ್ಪಿದ್ರು ಹಾಕ್ಯಣ ಖಾಕಿ ಡ್ರೆಸ್ ಆಕ್ಯಂಡು ನಾವು ಮುನ್ಸಿಪಾಲ್ಟಿ ಅಂಥ ಕುಣಿಬೇಕಷ್ಟೆ' ಎಂದು ಕುತರ್ಕವಾಡಿದರು.

ಇದನ್ನೆಲ್ಲ ಕೇಳಿಸಿಕೊಂಡ ವಸಂತ ಮೇಡಮ್ ಒಂದಿನ ಮತ್ತೆ ಎಲ್ಲ ಪೋಷಕರನ್ನು ಕರೆದು, 'ಈ ಬಾರಿ ಚಾಲೆಂಜ್ ತಗಂಡು ಕಾರ್ಯಕ್ರಮ ಮಾಡನ, ನಿಮ್ಮ ಮಕ್ಕಿಗೆಲ್ಲ ಡ್ಯಾನ್ಸಿಗೆ ತಕ್ಕನಾದ ಒಂದೇ ಥರದ ಬಟ್ಟೆ ಕೊಡುಸ್ರಿ, ಮಕ್ಕಿಗಾಗಿ ಒಂಚೂರು ಖರ್ಚುಮಾಡ್ರಿ' ಎಂದು ಹುರಿದುಂಬಿಸಿದರು. ಪೋಷಕರಿಗೂ ಸಹ ನಾಟಿದಂತಾಗಿ, 'ಆಗ್ಲಿ ತಗಳ್ರಿ ಮೇಡಮ್ನೋರೆ ಮಾಡದು ಮಾಡದೆಯ' ಎಂದಿದ್ದರು. ಅದರಂತೆ ಗೋಪಾಲ ಶೆಟ್ಟರ ಜವಳಿ ಅಂಗಡಿಯಲ್ಲಿ ಒಂದೇ ತರದ ಬಟ್ಟೆಗಳು ಲಭ್ಯವಿದ್ದು, ರೂ ಆರುನೂರು ಕೊಟ್ಟು ತರುವಂತೆ ವಸಂತ ಮೇಡಮ್ ತಿಳಿಸಿದ್ದರು. ಕಟ್ಟಕಡೆಯದಾಗಿ ಗಡ್ಡನೂ ಒಂದಿನ ಬೈದುಕೊಂಡು ಸಿದ್ದನನ್ನು ಕರೆದುಕೊಂಡು ಬಂದು ಬಟ್ಟೆ ಕೊಡಿಸಿದ್ದ.

ಈ ಮಧ್ಯೆ ಯಾರೊ ಒಬ್ಬ ಐನಾತಿಗೆ, ಈ ಕಸಗುಡಿಸೋರ ಮಕ್ಕಳನ್ನ ಇಟ್ಟುಕೊಂಡು ಈ ವಸಂತ ಮೇಡಮ್ ಇಷ್ಟೆಲ್ಲ ಪ್ರಯತ್ನ ಮಾಡಿ ಹಾಡು ಡ್ಯಾನ್ಸು ನಾಟಕ ಕಲಿಸಿದಾರೆ, ಈ ಕಾರ್ಯಕ್ರಮಕ್ಕೆ ಯಾರಾದರೂ ಒಬ್ಬ ಸೆಲೆಬ್ರಿಟಿ ಬರುವಂತಾದರೆ ಅನಾಯಾಸವಾಗಿ ಇದುವರೆಗೂ ಈ ಶಾಲೆಗಿರುವ ಇಮೇಜನ್ನು ಒಮ್ಮೆಲೆ ಒಡೆದು ಹಾಕಿಬಿಡಬಹುದು. ಕಸಗುಡಿಸೋರ ಮಕ್ಕಳು ಅನ್ನೋದೆ ನಮಗಿರುವ ಶಾಪ, ಅದನ್ನೆ ಯಾಕೆ ವರವಾಗಿಸಿಕೊಳ್ಳಬಾರದು ಎಂದು ತನಗೆ ಗೊತ್ತಿರುವ ಒಬ್ಬ ಸಿನಿಮಾ ನಟನಿಗೆ ಇನ್ಯಾರ ಮುಖಾಂತರವೋ ಸಂಪರ್ಕಿಸಿದ. ಈ ಪ್ರಖ್ಯಾತ ಸಿನಿಮಾ ನಟನಾದರೂ ತನ್ನ ನಟನೆಯ ಉತ್ತುಂಗವನ್ನು ತಲುಪಿದ ನಂತರ ಮರಳಿ ಮನೆಗೆ ಎಂದು ವಾಪಾಸ್ ಬಂದು ಸರ್ಕಾರಿ ಶಾಲೆ ಉಳಿವು, ದೇಣಿಗೆ, ದತ್ತು ಅದು ಇದು ಎಂದು ಸಾಮಾಜಿಕ ಕಳಕಳಿಗಾಗಿ ಮಾಧ್ಯಮಗಳಲ್ಲಿ ಆಗಿಂದಾಗ್ಗೆ ಕಾಣಿಸಿಕೊಳ್ಳುತ್ತಿದ್ದ. ಅವರ ಕಾಳಜಿಯನ್ನು ಇತ್ತ ಯಾಕೆ ಹರಿಸಿಕೊಳ್ಳಬಾರದು ಎನಿಸಿ ಕಸಗುಡಿಸುವವರ ಶಾಲೆಗೆ ಅತಿಥಿಯಾಗಿ ಬರಬೇಕು ಎಂಬ ಪ್ರಸ್ತಾವನೆಯನ್ನು ಇಟ್ಟಿದ್ದಕ್ಕೆ ಆತ, 'ಬರುವ ಇಚ್ಛೆಯಿದೆ, ಆದರೆ ಅದೇ ಡೇಟ್‌ಗೆ ಶೂಟಿಂಗ್ ಇರುವುದರಿಂದ ಬಿಟ್ಟು ಬಿಡಿ, ಇನ್ನೊಮ್ಮೆ ನಾನು ಬರುತ್ತೇನೆ' ಎಂದರು.

ನೆಚ್ಚಿದ ಎಮ್ಮೆ ಕೋಣ ಈಯ್ತಲ್ಲ ಎಂದು ಅಂಥದ್ದೆ ಹೆಸರುಳಿಸಿಕೊಂಡಿರುವ ಪಾಪುಲರ್ ಸಾಹಿತಿಯೊಬ್ಬರಿಗೆ ಕರೆ ಮಾಡಿದಾಗ, ಪೂರ್ವಾಪರವನ್ನೆಲ್ಲ ಸಹನೆಯಿಂದಲೇ ಕೇಳಿಕೊಂಡ ಸಾಹಿತಿ, 'ಈ ಬೇಸಿಗೆ ನನಗೆ ಆಗಿ ಬರಲ್ಲ, ಡಿಹೈಡ್ರೇಷನ್ ಆಗಿಬಿಡುತ್ತೆ, ಇನ್ನೊಮ್ಮೆ ಗ್ಯಾರಂಟಿ ಆ ಶಾಲೆಗೆ ಬರುತ್ತೇನೆ, ಸರ್ಕಾರದ ಜೊತೆಗೂ ಮಾತಾಡಿ ವಿಶೇಷ